StudentBounty.com

0303/0

**Third Semester of 3 Year LL.B. and Seventh Semester of 5 Year B.A., LL.B. /B.B.A., LL.B. Degree Examination, December 2013**

**CRIMINAL LAW – II**

**Criminal Procedure Code, JJ Act and Probation of Offenders Act**

Duration : 3 Hours | Max. Marks : 100

**Instructions** :
1. Answer all **5** Questions.
2. Answer **one** essay type and **one** short note question or problem from **each unit.**
3. Figures to the **right** indicate **marks**.
4. Answer should be written **either** in **English** or **Kannada completely**.

**UNIT – I**

Q. No. 1. (a) What do you mean by arrest ? Who may arrest ? Discuss the rights of the arrested person. Marks : 15

ದಸ್ತಗಿರಿ ಎಂದರೇನು ? ದಸ್ತಗಿರಿಯನ್ನು ಯಾರು ಮಾಡಬಹುದು ? ದಸ್ತಗಿರಿಯಾದ ವ್ಯಕ್ತಿಯ ಹಕ್ಕುಗಳನ್ನು ಚರ್ಚಿಸಿ.

OR/**ಅಥವಾ**

Discuss the procedure relating to the trial before the court of session.

ಸತ್ರ ನ್ಯಾಯಾಲಯದ ಮುಂದೆ ನಡೆಯುವ ವಿಚಾರಣಾ ಪ್ರಕ್ರಿಯೆಯನ್ನು ವಿವರಿಸಿ.

(b) Discuss the features of fair trial. Marks : 5

ನಿಷ್ಪಕ್ಷಪಾತ ಅಧಿವಿಚಾರಣೆಯ ಅಂಶಗಳನ್ನು ಚರ್ಚಿಸಿ.

OR/**ಅಥವಾ**

Discuss the constitution of criminal courts under the code.

ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಅಪರಾಧಿಕ ನ್ಯಾಯಾಲಯಗಳ ರಚನೆಯನ್ನು ವಿವರಿಸಿ.

**UNIT – II**

Q. No. 2. (a) "For every distinct offence there shall be separate charge and each charge shall be tried separately". Discuss with exceptions. Marks : 15

''ಪ್ರತಿಯೊಂದು ಅಪರಾಧಕ್ಕೂ ಪ್ರತ್ಯೇಕ ಆರೋಪವಿರತಕ್ಕದ್ದು ಮತ್ತು ಪ್ರತಿಯೊಂದು ಆರೋಪದ ಬಗ್ಗೆ ಪ್ರತ್ಯೇಕ ಅಧಿವಿಚಾರಣೆ ಮಾಡತಕ್ಕದ್ದು''. ಅಪವಾದದೊಂದಿಗೆ ಚರ್ಚಿಸಿ.

OR/**ಅಥವಾ**

**P.T.O.**

www.StudentBounty.com

Discuss the provisions of Cr. P.C. relating to the service of summons.
ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಸಮನ್ಸ್‌ಗಳನ್ನು ಜಾರಿಗೊಳಿಸುವ ಪ್ರಕ್ರಿಯೆಯನ್ನು ಚರ್ಚಿಸಿ.

(b) A court issues a proclamation against 'D' without mentioning the time within which and the place at which the absconding 'D' should present him self and proceeds to sell his movable properties. Advice 'D'. Marks : 5
ನ್ಯಾಯಾಲಯವು 'D' ಎನ್ನುವವನ ವಿರುದ್ಧ ಉದ್ಘೋಷಣೆಯನ್ನು ಹೊರಡಿಸಿದ್ದು ಅದರಲ್ಲಿ ಯಾವಾಗ ಮತ್ತು ಯಾವ ಸ್ಥಳದಲ್ಲಿ ತಪ್ಪಿಸಿಕೊಂಡಿರುವ 'D' ಯು ಹಾಜರಾಗಬೇಕೆಂಬುದನ್ನು ನಮೂದಿಸದೆ ಮತ್ತು ಅದೇ ಸಮಯದಲ್ಲಿ ನ್ಯಾಯಾಲಯವು 'D' ಗೆ ಸೇರಿದ ಚರ ಸ್ವತ್ತುಗಳನ್ನು ಮಾರಾಟಮಾಡಲು ಮುಂದಾಗುತ್ತದೆ ? 'D' ಗೆ ಸಲಹೆ ನೀಡಿ.

OR/**ಅಥವಾ**

A news paper containing defamatory article concerning 'Z' a resident of Hubli working in Mysore is printed and published at one place and is circulated at other different places including Hubli and Mysore. The Magistrate Court of which place has the jurisdiction to entertain complaint by 'Z' ? Give reasons.
ಹುಬ್ಬಳ್ಳಿಯ ನಿವಾಸಿಯಾಗಿದ್ದು ಮೈಸೂರಿನಲ್ಲಿ ಕೆಲಸ ಮಾಡುತ್ತಿರುವ 'Z' ನ ಬಗ್ಗೆ ಮಾನಹಾನಿ ಲೇಖನವನ್ನು ಹೊಂದಿರುವ ಪತ್ರಿಕೆಯು ಒಂದು ಸ್ಥಳದಲ್ಲಿ ಮುದ್ರಣಗೊಂಡು ಇನ್ನೊಂದು ಸ್ಥಳದಲ್ಲಿ ಪ್ರಕಟಣೆಗೊಂಡು ಬೇರೆ ಬೇರೆ ಸ್ಥಳಗಳಲ್ಲಿ ಹುಬ್ಬಳ್ಳಿ ಮತ್ತು ಮೈಸೂರು ಸೇರಿದಂತೆ ವಿತರಿಸಲಾಗುತ್ತಿದೆ. ಯಾವ ಸ್ಥಳದ ನ್ಯಾಯಿಕ ದಂಡಾಧಿಕಾರಿಯ ನ್ಯಾಯಾಲಯವು Z ವಿಷಯದಲ್ಲಿ ದೂರನ್ನು ಸ್ವೀಕರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ಕಾರಣ ಸಹಿತ ತಿಳಿಸಿ.

## UNIT – III

Q. No. 3. (a) Explain the manner in which a judgement is to be delivered and what a judgement should contain ? Marks : 15
ಯಾವ ರೀತಿಯಲ್ಲಿ ತೀರ್ಪನ್ನು ಕೊಡಬೇಕು ಮತ್ತು ತೀರ್ಪು ಏನನ್ನು ಒಳಗೊಂಡಿರಬೇಕು ಎಂಬುದನ್ನು ವಿವರಿಸಿ ?

OR/**ಅಥವಾ**

Discuss the kinds of persons from whom security may be taken for peace and good behaviour.
ಶಾಂತಿ ಮತ್ತು ಸದ್ವರ್ತನೆಗಾಗಿ ಯಾವ ವ್ಯಕ್ತಿಗಳಿಂದ ಮುಚ್ಚಳಿಕೆ ತೆಗೆದು ಕೊಳ್ಳಬಹುದು, ಎಂಬುದನ್ನು ಚರ್ಚಿಸಿ.

StudentBounty.com
www.StudentBounty.com

StudentBounty.com

(b) 'A' is tried for causing grievous hurt to 'B' and convicted. 'B' dies. Decide the consequence of the death of 'B' under Cr. P.C. Marks : 5

'B' ಗೆ ತೀವ್ರವಾದ ಗಾಯವನ್ನು ಮಾಡಿದ್ದಕ್ಕಾಗಿ 'A' ಯನ್ನು ನ್ಯಾಯಾಲಯವು ಅಧಿವಿಚಾರಣೆಗೆ ಒಳಪಡಿಸಿ ಶಿಕ್ಷಿಸುತ್ತದೆ. ತದನಂತರ 'B' ಯು ಮರಣವನ್ನು ಹೊಂದುತ್ತಾನೆ. 'B' ಯ ಮರಣದ ಪರಿಣಾಮವನ್ನು ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಕಾರಣ ಸಹಿತ ತಿಳಿಸಿ.

OR/**ಅಥವಾ**

'C' is the married daughter of 'K' and 'L' who lives in her husbands home. Now the parents 'K' and 'L' file an application before the court of magistrate claiming maintenance under S. 125 of Cr. P.C. from 'C' married daughter. Decide giving reasons.

'C' ಯು 'K' ಮತ್ತು 'L' ರ ವಿವಾಹಿತ ಮಗಳಾಗಿದ್ದು ತನ್ನ ಗಂಡನ ಜೊತೆ ಗಂಡನ ಮನೆಯಲ್ಲಿ ಜೀವಿಸುತ್ತಿದ್ದಾಳೆ. ಈಗ 'K' ಮತ್ತು 'L' ವಿವಾಹಿತ ಮಗಳಾದ 'C' ಯಿಂದ ಜೀವನಾಂಶವನ್ನು ಕೇಳಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ125ರ ಅಡಿಯಲ್ಲಿ ಅರ್ಜಿ ಸಲ್ಲಿಸುತ್ತಾರೆ. ಕಾರಣ ಸಹಿತ ಉತ್ತರಿಸಿ.

## UNIT – IV

Q. No. 4. (a) Under what circumstances a magistrate can take action for the removal of public nuisance. Marks : 15

ಯಾವ ಸಂದರ್ಭಗಳಲ್ಲಿ ಕಾರ್ಯಾಂಗ ದಂಡಾಧಿಕಾರಿಯು ಸಾರ್ವಜನಿಕ ಉಪದ್ರವಗಳ ನಿವಾರಣೆ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬಹುದು.

OR/**ಅಥವಾ**

What are the limitations for taking cognisance of certain offences ? Can a court extend the period of limitation ? If so how ?

ಕೆಲವು ಅಪರಾಧಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳಲು ಇರುವ ಕಾಲ ಪರಿಮಿತಿಯನ್ನು ತಿಳಿಸಿ. ಕಾಲ ಪರಿ ಮಿತಿಯನ್ನು ನ್ಯಾಯಾಲಯವು ವಿಸ್ತರಿಸಬಹುದೇ ? ವಿಸ್ತರಿಸಬಹುದಾದರೆ ಹೇಗೆ ?

www.StudentBounty.com

StudentBounty.com

(b) The District Magistrate while passing an order under S. 144 of Cr. P.C. asks 'A' to abstain from doing certain acts and 'B' to act under certain order. Now 'A' and 'B' challenge the order of District Magistrate on the ground that he has passed the order against more than one person. Decide. Marks : 5

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 144 ರ ವ್ಯಾಪ್ತಿಯಲ್ಲಿ ಜಿಲ್ಲಾ ಕಾರ್ಯಾಂಗ ದಂಡಾಧಿಕಾರಿಯು ಒಂದು ಆದೇಶವನ್ನು ಮಾಡುತ್ತಾ 'A' ಎನ್ನುವವನು ಕೆಲವು ಕೃತ್ಯಗಳನ್ನು ಮಾಡುವುದರಿಂದ ದೂರವಿರಬೇಕೆಂದೂ 'B' ಎನ್ನುವವನು ಆದೇಶದ ಅನುಸಾರ ಕೆಲವು ಕೃತ್ಯಗಳನ್ನು ಮಾಡಬೇಕೆಂದೂ ಆದೇಶಿಸುತ್ತಾನೆ. ಜಿಲ್ಲಾ ಕಾರ್ಯಾಂಗ ದಂಡಾಧಿಕಾರಿಯು ಒಂದಕ್ಕಿಂತ ಹೆಚ್ಚು ಜನರ ವಿರುದ್ಧ ಒಂದೇ ಆದೇಶ ಮಾಡಿದ್ದಾನೆ ಎಂದು 'A' ಮತ್ತು 'B' ಆದೇಶವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿ.

OR/**ಅಥವಾ**

A complaint for defamation was filed by 'B' against 'D' but it was dismissed. Subsequently a complaint was again filed by 'B'. Now the court has to decide the entertainability of the complaint having regard to the limitation period. From which date the limitation period would commence ? Give reasons.

'B' ಎನ್ನುವವನು 'D' ಯ ವಿರುದ್ಧ ಮಾನಹಾನಿಯ ಬಗ್ಗೆ ಹೂಡಿದ್ದ ದೂರನ್ನು ನ್ಯಾಯಾಲಯವು ವಜಾಗೊಳಿಸುತ್ತದೆ. ತದನಂತರ 'B' ಯು ಪುನಃ ನ್ಯಾಯಾಲಯಕ್ಕೆ ಮಾನಹಾನಿಯ ಬಗ್ಗೆ ದೂರನ್ನು ಸಲ್ಲಿಸುತ್ತಾನೆ. ಈಗ ನ್ಯಾಯಾಲಯವು ಕಾಲಪರಿಮಿತಿ ಅವಧಿಗೆ ಅನುಗುಣವಾಗಿ ದೂರಿನ ಸ್ವೀಕಾರಾರ್ಹತೆಯನ್ನು ನಿರ್ಧರಿಸಬೇಕಾಗುತ್ತದೆ. ಮಾನಹಾನಿ ದಿನದಿಂದ ಕಾಲಪರಿಮಿತಿ ಅವಧಿ ಪ್ರಾರಂಭವಾಗುತ್ತದೆಂದು ಕಾರಣ ಸಹಿತ ತಿಳಿಸಿ.

## UNIT – V

Q. No. 5. (a) What are the various orders that may be and may not be passed against juveniles ? Marks : 15

ಬಾಲಾಪರಾಧಿಗಳ ವಿರುದ್ಧ ನೀಡಬಹುದಾದ ಮತ್ತು ನೀಡಬಾರದ ಆದೇಶಗಳಾವುವು ?

OR/**ಅಥವಾ**

Discuss the objects of the Probation of Offenders Act, 1958.

1958 ರ ಅಪರಾಧಿಗಳ ಪರಿವೀಕ್ಷಣಾ ಕಾಯಿದೆಯ ಉದ್ದೇಶಗಳನ್ನು ಚರ್ಚಿಸಿ.

(b) Begging. Marks : 5

ಬಿಕ್ಷಾಟನೆ.

OR/**ಅಥವಾ**

Restriction on imprisonment of offenders under 21 years of age.

21 ವರ್ಷ ವಯಸ್ಸಿನೊಳಗಿನ ಅಪರಾಧಿಗಳನ್ನು ಕಾರಾವಾಸದಲ್ಲಿಡುವುದರ ಮೇಲೆ ನಿರ್ಬಂಧಗಳು.

www.StudentBounty.com